ನಮ್ಮ ಗಮನಕ್ಕೆ ತರುತ್ತಾರೆ. ಅಂತಹ ಕಾರ್ಖಾನೆಗಳ ಕಾರ್ಮಿಕರ ಬೇಡಿಕೆಯಾಗಿದ್ದ ಪಕ್ಷದಲ್ಲಿ ಸಂಬಂಧ ಪಟ್ಟವರಿಗೆ ಸೂಚನೆ ಕೊಡಂತ್ತೇವೆಂದು ಹೇಳುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು)

ಮೈಸೂರು ಜಿಲ್ಲೆಯ ಸರ್ಕಾರಿ ಸ್ವಾಮ್ಯಗಳ ಬಗ್ಗೆ

೧೬೧೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಸಿಲ್ಕ್ ಕಾರ್ಖಾನೆಗಳೆಷ್ಟು ?

ಆ) ಕಳೆದ ೩ ವರ್ಷಗಳಲ್ಲಿ ಈ ಕಾರ್ಖಾನೆಗಳು ಮಾಡಿರುವ ಲಾಭ ಮತ್ತು ನಷ್ಟಗಳೆಷ್ಟು ? (ಕಾರ್ಖಾನೆವಾರು ವಿವರ ನೀಡುವುದು).

ಇ) ಆ ಪೈಕಿ ನಷ್ಟಕ್ಕೊಳಗಾಗಿರುವ ಕಾರ್ಖಾನೆಗಳು ನಷ್ಟ ಹೊಂದಲು ಪ್ರಮುಖ ಕಾರಣ ಗಳಾವುವು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಸಚಿವರು).—

ಅ) ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ ಏಳು ರೇಷ್ಮೆ ಕಾರ್ಖಾನೆಗಳಿವೆ.

ಆ) ಕಳೆದ ಮೂರು ವರ್ಷಗಳಲ್ಲಿ ಈ ಕಾರ್ಖಾನೆಗಳು ಮಾಡಿರುವ ಲಾಭ ಮತ್ತು ನಷ್ಟದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	ಲಾಭ (+) ಅಥವಾ ನಷ್ಟ (—) (ಲಕ್ಷ ರೂಗಳಲ್ಲಿ)		
		೧೯೮೫–೮೬	೧೯೮೬–೮೭	೧೯೮೭–೮೮
೧	ಸರ್ಕಾರಿ ರೇಷ್ಮೆ ಕಾರ್ಖಾನೆ ಕೊಳ್ಳೇಗಾಲ	(—)೬೩.೬೭	(—)೫೯.೩೨	(—)೪೮.೩೦
೨	ಸರ್ಕಾರಿ ರೇಷ್ಮೆ ಕಾರ್ಖಾನೆ ಮಾಂಬಳ್ಳಿ	(—)೧೮.೮೧	(—)೨೦.೯೮	(—)೧೭.೨೫
೩	ಸರ್ಕಾರಿ ರೇಷೆ ಕಾರ್ಖಾನೆ ಸಂತೇಮಾರಹಳ್ಳಿ	(—)೩೫.೬೦	(—)೩೩.೯೨	(—)೩೧.೫೭
೪	ಸರ್ಕಾರಿ ರೇಷ್ಮೆ ಕಾರ್ಖಾನೆ ಚಾಮರಾಜನಗರ	(—)೨೯.೫೦	(—)೧೯.೨೪	(—)೨೩.೩೫
೫	ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ ವಾಡಿಗುಂಡಂ	(—)೧೩.೯೩	(—) ೫.೧೨	(—)೧೭.೪೫
೬	ರೇಷ್ಮೆ ಕಾರ್ಖಾನೆ ಟಿ. ನರಸೀಪುರ	(—)೮೭.೫೧	(—)೯೭.೪೯	(—)೧೦೫.೫೦
೭	ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು	(+)೧೭.೮೪	(—)೩೦.೯೭	(—)೬೧.೨೭

ಇ) ಕಾರ್ಖಾನೆಗಳು ನಷ್ಟ ಹೊಂದಲು ಕಾರಣಗಳು ಈ ಕೆಳಕಂಡಂತಿವೆ.

೧ ಉತ್ಪಾದನಾ ವೆಚ್ಚವು ಮಾರಾಟ ಬೆಲೆಗಿಂತ ಅಧಿಕವಾಗಿರುವುದು.

೨ ಸರ್ಕಾರಿ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಹೆಚ್ಚುವರಿ ಸಂಬಳ, ಭತ್ಯ ಮತ್ತು ಇತರ ಸೌಲಭ್ಯಗಳನ್ನು ಕಾನೂನು ರೀತ್ಯಾ ಕೊಡುತ್ತಿರುವುದು.

೩ ಸರ್ಕಾರಿ ಕಾರ್ಖಾನೆಗಳಲ್ಲಿ ಹೆಚ್ಚಿನ ಮೇಲ್ವಿಚಾರಣೆಯ ವೆಚ್ಚ.

೪ ಕೆಲವು ಕಾರ್ಖಾನೆಗಳಲ್ಲಿ ಬಳಕೆಯಲ್ಲಿರುವ ಯಂತ್ರೋಪಕರಣಗಳು ಒಂದು ಹಳೆಯದಾಗಿದ್ದು ಉತ್ಪಾದನೆ ಕಡಿಮೆ ಪರಿಣಾಮವಾಗಿ ಉತ್ಪಾದನೆಯ ವೆಚ್ಚ ಅಧಿಕ.

೫ ಕೆಲವು ಕಾರಣಗಳಿಂದ ವಯಸ್ಸಾದ ಮತ್ತು ಅದಕ್ಷ ಕಾರ್ಮಿಕರನ್ನು ಉದ್ಯೋಗದಲ್ಲಿ ಮುಂದುವರೆಸಬೇಕಾದ ಅಗತ್ಯ. ಇದರ ಪರಿಣಾಮ ಉತ್ಪಾದನೆ ಕಡಿಮೆ ಹಾಗೂ ಉತ್ಪಾದನೆಯ ವೆಚ್ಚ ಅಧಿಕ.

೬ ಕಾರ್ಖಾನೆಗಳು ಹಳ್ಳಿಗಳ ಸರಹದ್ದಿನಲ್ಲಿ ಇರುವುದರಿಂದ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಕಡಿತ ಅಥವಾ ನಿತ್ಯ ಹೋಗುವ ಪರಿಸ್ಥಿತಿಯ ಪರಿಣಾಮವಾಗಿ ಉತ್ಪಾದನೆಯು ಕುಂಠಿತ ಹಾಗೂ ಉತ್ಪಾದನೆಯ ವೆಚ್ಚ ಅಧಿಕ.

೭ ಸರ್ಕಾರಿ ಕಾರ್ಖಾನೆಗಳು ರೇಷ್ಮೆ ಗೂಡಿನ ಬೆಲೆ ಅಧಿಕಗೊಂಡರೂ ಕಾರ್ಖಾನೆಯನ್ನು ಕಡ್ಡಾಯವಾಗಿ ಕಾರ್ಮಿಕರ ಹಿತದೃಷ್ಟಿಯಿಂದ ನಡೆಸಲೇಬೇಕಾದ ಅಗತ್ಯ.

೮ ಅಗತ್ಯವಾಗಿ ಬೇಕಾಗಿರತಕ್ಕಂತಹ ಕಾರ್ಯಾಚರಣೆಯ ಬಂಡವಾಳವು ದೊರೆಯದೆ ಇರುವುದು (ನಿಗದಿಯ ಘಟಕ)

೯ ಟಿ. ನರಸೀಪುರಗಲ್ಲಿರುವ ರೇಷ್ಮೆ ನೂಲು ತೆಗೆಯುವ ಘಟಕಕ್ಕೆ ಅಗತ್ಯವಿರುವ ಬೈ ಪೋಲ್ಟೈನ್ ರೇಷ್ಮೆ ಗೂಡು ಸಾಕಷ್ಟು ದೊರೆಯದೆ ಇರುವುದು (ನಿಗದಿಯ ಘಟಕ).

೧೦ ನವೀಕರಣ ಯೋಜನೆ ಪಡೆದಿರುವ ಸಾಲದ ಮೇಲಿನ ಹೆಚ್ಚಿನ ಬಡ್ಡಿಯ ಪ್ರಭಾರ ಹಾಗೂ ಸವಕಳಿಯ ಮುನ್ನೇರ್ಪಾಡುಗಳು. (ನಿಗದಿಯ ಘಟಕ)

೧೧ ಮಾರುಕಟ್ಟೆಯಂ ಅಡತಡೆಗಳು ಹಾಗೂ ತೊಂದರೆಗಳು.

೧೨ ನವೀಕರಣ ರೇಷ್ಮೆ ತಯಾರಿಕೆಯಲ್ಲಿ ರೆಂಡಿಟ್ಟಾ ಜಾಸ್ತಿಯಾಗಿ ಉತ್ಪಾದನಾ ವೆಚ್ಚ ಜಾಸ್ತಿಯಾಗಿರುವುದು.

ಶ್ರೀ ವೇದಾಂತ ಪೆಮ್ಮಿಗೆ.—ಮಾನ್ಯ ಅಧ್ಯಕ್ಷರೇ ಈ ಜಿಲ್ಲೆಯ ೭ ಕಾರ್ಖಾನೆಗಳಿಂದ ಮೂರು ವರ್ಷಗಳಿಗೆ ೮.೭೫ ಕೋಟಿ ರೂಪಾಯಿಗಳು ನಷ್ಟವಾಗಿದೆ, ಅಂದರೆ ಇದು ಬಿಳಿ ಆನೆ ಸಾಕತಕ್ಕಂಥ ವ್ಯವಸ್ಥೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೫-೮೬ಕ್ಕೆ ನಷ್ಟ ೨೪೮.೫೫ ಲಕ್ಷ, ೧೯೮೬-೮೭ಕ್ಕೆ ೨೬೨.೧೪ ಲಕ್ಷ, ೧೯೮೭-೮೮ಕ್ಕೆ ೩೧೪.೬೯ ಲಕ್ಷ ನಷ್ಟವಾಗಿದೆ.

ಶ್ರೀ ವೇದಾಂತ ಪೆಮ್ಮಿಗೆ.—ಅಧ್ಯಕ್ಷರೇ, ಈ ಮೂರು ವರ್ಷಗಳಲ್ಲಿ, ೭ ಕಾರ್ಖಾನೆಗಳಿಂದ ಈ ರೀತಿಯಲ್ಲಿ ನಷ್ಟವಾಗಿರುವುದನ್ನು ನೋಡಿದರೆ, ಇದೊಂದು ಬಿಳಿ ಆನೆಯನ್ನು ಸಾಕತಕ್ಕಂಥ ವ್ಯವಸ್ಥೆಯಾಗಿದೆ. ಮೈಸೂರು ನಗರದ ರೇಷ್ಮೆ ಕಾರ್ಖಾನೆಯಲ್ಲಿ ಹಲವಾರು ಕೋಟಿ ರೂಪಾಯಿಗಳ ರೇಷ್ಮೆ ಸೀರೆಗಳು ಗೋಡೌನ್‌ನಲ್ಲಿ ಈಗಲೂ ಇದೆ. ವಿನಯದು, ಜರಿ ರೇಷ್ಮೆ ಸೀರೆಗೆ ಇಡೀ ದೇಶದಲ್ಲಿ ವಿಪರೀತ ಬೇಡಿಕೆ ಇದ್ದರೂ ಸಹಿತ ಜರಿ ರೇಷ್ಮೆ ಸೀರೆಯನ್ನು ತಯಾರೂ ಮಾಡದೆ, ಸಾದಾ ರೇಷ್ಮೆ ಸೀರೆಯನ್ನು ತಯಾರು ಮಾಡುವುದಕ್ಕೆ ಕಾರಣ ಏನು ?

ಶ್ರೀ ಎ. ಲಕ್ಷ್ಮೀಸಾಗರ್.— ಈಗಾಗಲೇ ಮಾರಾಟದ ವ್ಯವಸ್ಥೆ ಮಾಡಿದ್ದೇವೆ, ಏನಾದರೂ ಹೆಚ್ಚು ಕಡಿಮೆ ಇದ್ದರೆ ಅದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಇನ್ನು ಜರಿ ರೇಷ್ಮೆ ಸೀರೆ ಬಗ್ಗೆ ಇದರಲ್ಲಿ ಬರುವುದಿಲ್ಲ, ನನ್ನ ಹತ್ತಿರ ಮಾಹಿತಿ ಇಲ್ಲ ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಪೂರ್ಣವಾದ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ,—ಜರಿ ರೇಷ್ಮೆ ಸೀರೆ ತಯಾರು ಮಾಡಬೇಕಾದರೆ, ಮಗ್ಗಗಳಿಗೆ ಅಗತ್ಯವಾದ ಡಾಬಿಯನ್ನು ಜೋಡಿಸಿದರೆ, ಹೆಚ್ಚಿನ ಪ್ರಮಾಣದಲ್ಲಿ ಈ ಜರಿ ಸೀರೆಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ, ಹೀಗಿದ್ದರೂ ಇದುವರೆಗೆ ಏಕೆ ಈ ಕಾರ್ಯಕ್ರಮ ಕೈಗೊಂಡಿಲ್ಲ ?

ಶ್ರೀ ಎಂ. ರಘುಪತಿ,—ಅಧ್ಯಕ್ಷರೇ ಸೀರೆಗಳ ವಿಚಾರ ಗೊತ್ತಿಲ್ಲದ ಮಂತ್ರಿಗಳಿಗೆ ಈ ಪ್ರಶ್ನೆ ಕೇಳಿದರೆ ಅವರು ಏನೆಂದು ಉತ್ತರ ಕೊಡುತ್ತಾರೆ ? ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಕೇಳಬಾರದು.

ಶ್ರೀ ವೇದಾಂತ ಹೆಮ್ಮಿಗೆ,—ಎರಡನೆಯ ಪ್ರಶ್ನೆ ಕೆ.ಎಸ್.ಡಿ.ಸಿ.ನವರು ಪ್ರತಿ ವರ್ಷ ಈ ಕಾರ್ಖಾನೆಗಳಲ್ಲಿ ತಯಾರು ಮಾಡತಕ್ಕಂಥ ರೇಷ್ಮೆ ಸೀರೆಗಳಿಗೆ ದರವನ್ನು ಹೆಚ್ಚು ಮಾಡದೆ ಹೋದರೂ ಸಹಿತ ಸಾರಪ್ಪ ಬೇಡಿಕೆ ಇಡೀ ದೇಶದಲ್ಲಿ ಇದೆ, ಈ ರೀತಿ ಬೇಡಿಕೆ ಇದ್ದರೂ ಕೂಡ ಏಕೆ ಈ ಜರಿ ರೇಷ್ಮೆ ಸೀರೆ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾ ಇಲ್ಲ. ಮುಂದೆಯಾದರೂ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯಸದಸ್ಯರ ಮೂಲ ಪ್ರಶ್ನೆಗಳು ಸೀರೆಗಳಿಗೆ ಸಂಬಂಧಪಟ್ಟಿಲ್ಲ. ಸೀರೆ ತಯಾರಿಕೆ ಬಗ್ಗೆ ಮಾತ್ರ ಸೀಮಿತವಾಗಿರುತ್ತವೆ ಇವರು ಹಾಕಿರತಕ್ಕಂಥ ಮೂರು ಮೂಲ ಪ್ರಶ್ನೆಗಳಿಂದ, ಇದು ಉದ್ಭವವಾಗುವುದಿಲ್ಲ ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಸಂಪೂರ್ಣವಾದ, ಸವಿಶಿಷ್ಟಾಂತ, ಸಂಬಂಧಪಟ್ಟ ಎಲ್ಲಾ ವಿವರಗಳನ್ನೂ ಒದಗಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಗ್ಗಗಳಿಗೆ ಡಾಬಿಯನ್ನು ಜೋಡಿಸುವುದಾದರೆ, ಹೆಚ್ಚಿನ ಪ್ರಮಾಣದಲ್ಲಿ ರೇಷ್ಮೆ ಸೀರೆಗಳನ್ನು ನೇಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಡಾಬಿಯನ್ನು ಮಗ್ಗಗಳಿಗೆ ಜೋಡಿಸುವ ಕಾರ್ಯವನ್ನು ಏಕೆ ಕೈಗೊಂಡಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯಸದಸ್ಯರ ಮೂಲ ಪ್ರಶ್ನೆಯಿಂದ ಈ ಉಪ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಪ್ರತ್ಯೇಕವಾಗಿ, ಅಲಾಯಿದ ಪ್ರಶ್ನೆಯನ್ನು ಯಾನ್ಯ ಸದಸ್ಯರು ಕೇಳಿದ್ದೇ ಆದರೆ ಅವುಗಳಿಗೆ ಪೂರ್ಣವಾದ ಉತ್ತರಗಳನ್ನು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ (೧೪೮೪)

(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಜಮಖಂಡಿ ನಗರದಲ್ಲಿ ವಿಶ್ರಾಂತಿ ಧಾಮದ ನಿರ್ಮಾಣ

೧೪೮೫ ಶ್ರೀ ವೇದಾಂತ ಹೆಮ್ಮಿಗೆ (ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) ಅವರ ಪರವಾಗಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ನಗರದ ಹೊರವಲಯದಲ್ಲಿರುವ ಕಟ್ಟಿಕೆರೆಗೆ ಹೊಂದಿ ಇರುವ ಗುಡ್ಡದ ಮೇಲೆ ಅರಣ್ಯ ಇಲಾಖೆಯ ವಿಶ್ರಾಂತಿ ಧಾಮಕ್ಕೆ ಶಂಖು ಸ್ಥಾಪನೆಯಾದದ್ದು ನಿಜವೇ ?

ಆ) ಈ ವಿಶ್ರಾಂತಿ ಧಾಮದ ನಿರ್ಮಾಣಕ್ಕೆ ಗೊತ್ತುಪಡಿಸಿರುವ ಅಂದಾಜು ಹಣವೆಷ್ಟು ?

ಇ) ಈ ಕಟ್ಟಡದ ನೀಲಿ ನಕ್ಷೆ ತಯಾರಾಗಿದಯೇ ?

ಈ) ಹಾಗಿದ್ದಲ್ಲಿ ಕಟ್ಟಡದ ನಿರ್ಮಾಣ ಕಾರ್ಯ ಆರಂಭವಾಗುವುದು ಯಾವಾಗ?

ಶ್ರೀ ಜೆ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು),—

ಅ) ಹೌದು.

ಆ) ರೂ. ೫.೦೦ ಲಕ್ಷ (ಐದು ಲಕ್ಷ)

ಇ) ಹೌದು.

ಈ) ಈಗಾಗಲೇ ಕಟ್ಟಡದ ಕಾರ್ಯ ಆರಂಭವಾಗಿದೆ.